# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1206+1208

ಸದಸ್ಯರ ಹೆಸರು : ಶ್ರೀ ಶರಣಗೌಡ ಬಯ್ಯಾಪುರ
(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಹಾಗೂ
ಶ್ರೀಮತಿ ಹೇಮಲತಾ ನಾಯಕ್
(ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ : 19.12.2024

ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು.

<table>
<tr><th>ಕ್ರ. ಸಂ.</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>ಅ</td><td>ಸರ್ಕಾರವು ಕೃಷ್ಣಾ ಮೇಲ್ದಂಡೆ ಯೋಜನೆಯ ಮೂಲಕ ಎಷ್ಟು ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ; ಪ್ರಸ್ತುತ ಸದರಿ ಕಾಮಗಾರಿಗಳ ನೈಜ ವರದಿಯನ್ನು ತಿಳಿಸುವುದು;</td><td>ಕೃಷ್ಣಾ ಭಾಗ್ಯ ಜಲ ನಿಗಮದಡಿಯ ಕೃಷ್ಣಾ ಮೇಲ್ದಂಡೆ ಯೋಜನೆ ಮೂಲಕ ಅನುಷ್ಠಾನಗೊಳಿಸಲಾಗುತ್ತಿರುವ ಕಾಮಗಾರಿಗಳ ವಿವರಗಳು:
<table>
<tr><th>ಕ್ರ/ಸಂ</th><th>ಕೃ.ಮೇ.ಯೋ. ಹಂತ</th><th>ಕಾಮಗಾರಿಗಳ ಸಂಖ್ಯೆ</th></tr>
<tr><td>1</td><td>ಹಂತ-1 & 2.</td><td>11</td></tr>
<tr><td>2</td><td>ಹಂತ- 1 & 2ರ ಉಳಿತಾಯದ ನೀರಿನ ಹಂಚಿಕೆ.</td><td>6</td></tr>
<tr><td>3</td><td>ಹಂತ-3</td><td>9</td></tr>
<tr><td>4</td><td>ಹಂತ- 3ರ ಉಳಿತಾಯದ ನೀರಿನ ಹಂಚಿಕೆ</td><td>6</td></tr>
<tr><td></td><td>ಒಟ್ಟು</td><td>32</td></tr>
</table>
ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.</td></tr>
<tr><td>ಆ</td><td>ಸದರಿ ಜಲಾಶಯದ ಒಳಮಟ್ಟದ ಸಾಮರ್ಥ್ಯದ 519.60 ಮೀಟರ್ ದಿಂದ 524.25 ಮೀ. ವರೆಗೆ ಹೆಚ್ಚಿಸುವ ಪ್ರಸ್ತಾವನೆಯು ಯಾವ ಹಂತದಲ್ಲಿದೆ; ವಿಳಂಬವಾಗಲು ಕಾರಣವೇನು; ಸದರಿ ವಿಳಂಬ ನಿವಾರಿಸಲು ಸರ್ಕಾರವು ಯಾವ ಕ್ರಮಗಳನ್ನು ತೆಗೆದುಕೊಂಡಿದೆ; (ಸಂಪೂರ್ಣ ಮಾಹಿತಿಯನ್ನು ಒದಗಿಸುವುದು)</td><td>ಕೃ.ಮೇ.ಯೋ ಹಂತ-3ಕ್ಕೆ ಹಂಚಿಕೆಯಾಗಿರುವ ನೀರಿನ ಬಳಕೆಗೆ ಆಲಮಟ್ಟಿ ಜಲಾಶಯದ ನೀರಿನ ಸಂಗ್ರಹಣೆ ಮಟ್ಟವನ್ನು ಆರ್.ಎಲ್.519.60 ಮೀ. ನಿಂದ ಆರ್.ಎಲ್.524.256 ಮೀ.ಗೆ (4,656ಮೀ) ಎತ್ತರಿಸುವುದಾಗಿದ್ದು, ಇದು ಕೃಷ್ಣಾ ನ್ಯಾಯಾಧೀಕರಣ-2ರ ಅಂತಿಮ ತೀರ್ಪು ಕೇಂದ್ರ ಸರ್ಕಾರದಿಂದ ಹೊರಡಿಸುವ ಅಧಿಸೂಚನೆಗೆ ಒಳಪಟ್ಟಿದ್ದು, ಐತೀರ್ಪು ಇನ್ನೂ ಅಧಿಸೂಚನೆ ಆಗಬೇಕಾಗಿದೆ.<br>ಮಾನ್ಯ ಸರ್ವೋಚ್ಛ ನ್ಯಾಯಾಲಯದ ದಿನಾಂಕ 16.09.2011ರ ತೀರ್ಪಿನಲ್ಲಿ ಕೃಷ್ಣಾ ನ್ಯಾಯಾಧೀಕರಣ-2ರ ಅಂತಿಮ ತೀರ್ಪನ್ನು ಗೆಜೆಟ್ ಪ್ರಕಟಣೆ ಮಾಡದಂತೆ ಕೇಂದ್ರ ಸರ್ಕಾರಕ್ಕೆ ಆದೇಶಿಸಲಾಗಿದ್ದು, ಸದರಿ ತೀರ್ಪನ್ನು ಮಾರ್ಪಡಿಸುವಂತೆ ಕೋರಿ ರಾಜ್ಯ ಸರ್ಕಾರವು ಮಾನ್ಯ ಸರ್ವೋಚ್ಛ ನ್ಯಾಯಾಲಯಕ್ಕೆ ಮಧ್ಯಕಾಲೀನ ಅರ್ಜಿಗಳನ್ನು ಸಲ್ಲಿಸಿದೆ.<br>ಕೃಷ್ಣಾ ನ್ಯಾಯಾಧೀಕರಣದ ಅಂತಿಮ ತೀರ್ಪನ್ನು ಗೆಜೆಟ್ ಅಧಿಸೂಚನೆ ಹೊರಡಿಸುವ ಬಗ್ಗೆ ಮಾನ್ಯ ಸರ್ವೋಚ್ಛ ನ್ಯಾಯಾಲಯದ ಆದೇಶವನ್ನು ಮಾರ್ಪಡಿಸಲು ಸೂಕ್ತ ಅಫಿಡವಿಟ್ ಸಲ್ಲಿಸಿ ನಂತರ ನ್ಯಾಯಾಧೀಕರಣದ ಆದೇಶವನ್ನು ಪ್ರಕಟಿಸಲು ಅಗತ್ಯ ಕ್ರಮ ಕೈಗೊಳ್ಳಲು ಕೇಂದ್ರ ಸರ್ಕಾರವನ್ನು ಕೋರಲಾಗಿದೆ. ಸದರಿ ವಿಷಯದ ಕುರಿತು ರಾಜ್ಯ ಸರ್ಕಾರವು ಎಲ್ಲಾ ಆಡಳಿತಾತ್ಮಕ ಹಾಗೂ ಕಾನೂನಾತ್ಮಕ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.</td></tr>
<tr><td>ಇ</td><td>ಕೊಪ್ಪಳ ಏತ ನೀರಾವರಿ ಯೋಜನೆಯ ಪ್ರಸ್ತುತ ಯಥಾಸ್ಥಿತಿ ಹಾಗೂ ಈ ಯೋಜನೆಯಲ್ಲಿ ನಿರ್ವಹಿಸಿದ</td><td>ಕೊಪ್ಪಳ ಏತ ನೀರಾವರಿ ಯೋಜನೆಯನ್ನು ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3 ರಡಿ ಕೈಗೆತ್ತಿಕೊಂಡಿದ್ದು, 1,12,015 ಹೆ. ಪ್ರದೇಶಕ್ಕೆ ಸೂಕ್ಷ್ಮ ನೀರಾವರಿ ಪದ್ಧತಿ ಮೂಲಕ ನೀರಾವರಿ ಸೌಲಭ್ಯ ಕಲ್ಪಿಸಬೇಕಾಗಿರುತ್ತದೆ.</td></tr>
</table>

| ಕ್ರ ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| | ಕಾಮಗಾರಿಗಳು ಕಳಪೆ ಮಟ್ಟದಿಂದ ಕೂಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗೂ ತರಾತುರಿಯಲ್ಲಿ ಯೋಜನೆಯನ್ನು ಸರ್ಕಾರಕ್ಕೆ ಹಸ್ತಾಂತರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ಪ್ರಸ್ತುತ ಯೋಜನೆಯ ಹೆಡ್‌ವರ್ಕ ಹಾಗೂ Bulkfeeder ಕಾಮಗಾರಿಗಳು ಬಹುತೇಕ ಪೂರ್ಣಗೊಳ್ಳುವ ಹಂತದಲ್ಲಿರುತ್ತವೆ. ಪ್ರಸ್ತುತ ಯೋಜನೆಯಡಿ ಕಲ್ಪಿಸಲಾದ ಮೂಲ ಸೌಕರ್ಯವನ್ನು ಬಳಸಿಕೊಂಡು 78 ಕೆರೆಗಳನ್ನು ತುಂಬಿಸಲು ಯೋಜನೆ ರೂಪಿಸಲಾಗಿರುತ್ತದೆ. ಈ ಪೈಕಿ ಈಗಾಗಲೇ 61 ಕೆರೆಗಳಿಗೆ ನೀರನ್ನು ತುಂಬಿಸಲಾಗಿದ್ದು, ಬಾಕಿ 17 ಕೆರೆಗಳ ನೀರು ತುಂಬಿಸುವ ಕಾಮಗಾರಿ ಪ್ರಗತಿಯಲ್ಲಿವೆ.<br>ಯೋಜನೆಯಡಿಯ ಕಾಮಗಾರಿಗಳು ಅನುಷ್ಠಾನ/ ನಿರ್ವಹಣೆ ಹಂತದಲ್ಲಿದ್ದು, ಕಾಲಕಾಲಕ್ಕೆ ಅಗತ್ಯ ಪರೀಕ್ಷೆಗಳನ್ನು ನಡೆಸಿ ಕಾಮಗಾರಿಯನ್ನು ನಿರ್ವಹಿಸಲಾಗಿದೆ. ಆದಾಗ್ಯೂ ಯೋಜನೆಗಳ ಬಗ್ಗೆ ಅಲ್ಲಲ್ಲಿ ದೂರುಗಳು ಇದ್ದು, ವಿಚಕ್ಷಣಾ ದಳವು ಸಹ ತನಿಖೆ ಮಾಡಿ ವರದಿ ನೀಡಿದ್ದು, ವರದಿಯನುಸಾರ ಕ್ರಮವಹಿಸಲಾಗುತ್ತಿದೆ. ಯಾವುದೆ ಗುರುತರ ಆರೋಪಗಳು ಇರುವುದಿಲ್ಲ.<br>ಪ್ರಸ್ತುತ ಯೋಜನೆಯ ಕಾಮಗಾರಿಗಳು ಅನುಷ್ಠಾನ ಮತ್ತು ನಿರ್ವಹಣೆ ಹಂತದಲ್ಲಿರುವುದರಿಂದ ಯೋಜನೆಯನ್ನು ಹಸ್ತಾಂತರಿಸಿಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ. |
| ಈ | ಆಲಮಟ್ಟಿ ಡ್ಯಾಂನ ಪ್ರಸ್ತುತ ಎತ್ತರ ಎಷ್ಟು ಹಾಗೂ ಪ್ರಸ್ತುತ ಎಷ್ಟು ಎಕರೆ ಪ್ರದೇಶವು ನೀರಾವರಿ ಯೋಜನೆಯಡಿಯಲ್ಲಿ ಬರುತ್ತದೆ; (ವಿವರ ನೀಡುವುದು) | ಆಲಮಟ್ಟಿ ಅಣೆಕಟ್ಟಿನ ಗೇಟಿನ ಪ್ರಸ್ತುತ ಎತ್ತರವು 519.600 ಮೀ ವರೆಗೆ ಇದ್ದು (123.08 ಟಿ.ಎಂ.ಸಿ), ಕೃ.ಮೇ.ಯೋ ಹಂತ-1 & 2ರ ಅಡಿ 6,22,023 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿದ್ದು, ಈ ಪೈಕಿ 6,20,000 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿಯನ್ನು ಒದಗಿಸಲಾಗಿರುತ್ತದೆ. |
| ಉ | ಆಲಮಟ್ಟಿ ಡ್ಯಾಂನ ಎತ್ತರ ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಈ ಕುರಿತು ಸರ್ಕಾರವು ಕೈಗೊಳ್ಳಲಿರುವ ಕ್ರಮಗಳ ವಿವರ ನೀಡುವುದು; | ಹೌದು.<br>ಕೃಷ್ಣಾ ನ್ಯಾಯಾಧೀಕರಣ ತೀರ್ಪು-2 ರಂತೆ ಆಲಮಟ್ಟಿ ಆಣೆಕಟ್ಟೆಯ ಗೇಟುಗಳನ್ನು 524.256 ಮೀಟರ್ ಗೆ ಎತ್ತರಿಸಲು ನೀಡಲಾಗಿದ್ದರೂ ಸಹ ಸದರಿ ತೀರ್ಪನ್ನು ಕೇಂದ್ರ ಸರ್ಕಾರದ ಗೆಜೆಟ್‌ನಲ್ಲಿ ಪ್ರಕಟಣೆ ಇದುವರೆಗೂ ಆಗದೇ ಇರುವದರಿಂದ ಆಲಮಟ್ಟಿ ಆಣೆಕಟ್ಟೆಯನ್ನು ಮಟ್ಟ 524.256 ಮೀಟರ್ ಗೆ ಎತ್ತರಿಸಲು ವಿಳಂಬವಾಗುತ್ತಿದೆ.<br>ಹೊಸ ಭೂಸ್ವಾಧೀನ ಕಾಯ್ದೆ 2013ರ ಅನ್ವಯ ಜಲಾಶಯದಲ್ಲಿ ನೀರು ಸಂಗ್ರಹಿಸುವ 6 ತಿಂಗಳು ಮೊದಲು ಭೂ ಮಾಲೀಕರಿಗೆ ಪರಿಹಾರ ಧನ ವಿತರಣೆ, ಮುಳುಗಡೆಯಾಗುವ 20 ಗ್ರಾಮಗಳ ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕೆಲಸಗಳು ಸಂಪೂರ್ಣಗೊಳ್ಳಬೇಕು.<br>ಅದರಂತೆ, ಈಗಾಗಲೇ ಕೃ.ಮೇ.ಯೋ ಹಂತ-3ರಡಿ ಆಲಮಟ್ಟಿ ಜಲಾಶಯದ ನೀರಿನ ಸಂಗ್ರಹಣೆ ಮಟ್ಟವನ್ನು ಆರ್.ಎಲ್.519.60 ಮೀ. ನಿಂದ ಆರ್.ಎಲ್.524.256 ಮೀ.ಗೆ (4,656ಮೀ) ಎತ್ತರಿಸುವ ಯೋಜನೆಯ ಅನುಷ್ಠಾನಕ್ಕೆ ಅಗತ್ಯವಿರುವ ಜಮೀನನ್ನು ಹಂತ ಹಂತವಾಗಿ ಭೂಸ್ವಾಧೀನಪಡಿಸಿಕೊಂಡು ಪರಿಹಾರ ನೀಡುವ ಪ್ರಕ್ರಿಯೆ ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿವೆ.<br>ಕೃಷ್ಣಾ ನ್ಯಾಯಾಧೀಕರಣದ ಅಂತಿಮ ತೀರ್ಪನ್ನು ಗೆಜೆಟ್ ಅಧಿಸೂಚನೆ ಹೊರಡಿಸುವ ಕುರಿತು ರಾಜ್ಯ ಸರ್ಕಾರದಿಂದ ಎಲ್ಲಾ ಆಡಳಿತಾತ್ಮಕ ಹಾಗೂ ಕಾನೂನಾತ್ಮಕ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. |
| ಊ | ಆಲಮಟ್ಟಿ ಡ್ಯಾಂನ ಎತ್ತರ ಹೆಚ್ಚಳ ಮಾಡುವುದರಿಂದ ಆ ಭಾಗದ ರೈತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಡ್ಯಾಂನ ಎತ್ತರ ಹೆಚ್ಚಳ ಮಾಡಲು ಸರ್ಕಾರ ಮುಂದಾಗುವುದೇ? (ಮಾಹಿತಿ ನೀಡುವುದು) | |

ಸಂಖ್ಯೆ:ಜಸಂಇ 108 ಡಬ್ಲ್ಯೂಬಿಎಂ 2024

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ

ಅನುಬಂಧ

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳಾದ ಶ್ರೀ ಶರಣಗೌಡ ಬಯ್ಯಪುರ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಹಾಗೂ ಶ್ರೀಮತಿ ಹೇಮಲತಾ ನಾಯಕ್ (ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1206+1208ಕ್ಕೆ ಮಾಹಿತಿ.

| ಕ್ರ. ಸಂ. | ಕಾಲುವೆಗಳು | ಯೋಜನೆಗಳು ಒಳಪಡುವ ಜಿಲ್ಲೆ | ಯೋಜಿತ ಅಚ್ಚುಕಟ್ಟು ಹೆಕ್ಟೇರ್‌ಗಳಲ್ಲಿ. | ಅಧಿಸೂಚಿಸಿದ ಅಚ್ಚುಕಟ್ಟು ಹೆಕ್ಟೇರ್‌ಗಳಲ್ಲಿ. | ಪ್ರಸ್ತುತ ಹಂತ |
|---|---|---|---|---|---|
| ಕೃ.ಮೇ.ಯೋ. ಹಂತ-1 & 2:- | | | | | |
| 1 | ಕೃ.ಮೇ.ಯೋ. ಹಂತ-1 & 2 ರಡಿಯಲ್ಲಿ ಬರುವ ಯೋಜನೆಗಳು | ಯಾದಗಿರಿ, ಕಲಬುರಗಿ, ವಿಜಯಪುರ & ರಾಯಚೂರು | 6,22,023 | 6,20,000 | ಯೋಜನೆಯನ್ನು ಪೂರ್ಣಗೊಳಿಸಿ ನೀರಾವರಿ ಕಲ್ಪಿಸಲಾಗಿರುತ್ತದೆ. |
| ಕೃ.ಮೇ.ಯೋ. ಹಂತ-1 & 2 ರ ಉಳಿತಾಯದ ನೀರಿನಲ್ಲಿ ಕೈಗೊಂಡ ಯೋಜನೆಗಳು:- | | | | | |
| 1 | ಮರೋಳ ಏತ ನೀರಾವರಿ ಯೋಜನೆ | ಬಾಗಲಕೋಟ | 36,100 | 36,993 | ಯೋಜನೆಯನ್ನು ಪೂರ್ಣಗೊಳಿಸಿ ನೀರಾವರಿ ಕಲ್ಪಿಸಲಾಗಿರುತ್ತದೆ. |
| 2 | ತಿಮ್ಮಾಪೂರ ಏತ ನೀರಾವರಿ ಯೋಜನೆ ಡಿಸಿ-1 & ಡಿಸಿ-2 | ಬಾಗಲಕೋಟ | 20,100 | 17,881 | ಯೋಜನೆಯನ್ನು ಪೂರ್ಣಗೊಳಿಸಿ ನೀರಾವರಿ ಕಲ್ಪಿಸಲಾಗಿರುತ್ತದೆ. |
| 3 | ನಾರಾಯಣಪುರ ಬಲದಂಡೆ ಕಾಲುವೆಯಡಿ ವಿತರಣಾ ಕಾಲುವೆ 9ಎ | ರಾಯಚೂರು | 15,250 | 14,747 | ಕಾಮಗಾರಿಯು ಬಹುತೇಕ ಪೂರ್ಣಗೊಂಡಿದೆ. |
| 4 | ಬೂದಿಹಾಳ-ಪೀರಾಪೂರ ಏತ ನೀರಾವರಿ ಯೋಜನೆ ಹಚಿತ-1 | ವಿಜಯಪುರ | 20,243 | -- | ಮುಖ್ಯ ಸ್ಥಾವರದ ಕಾಮಗಾರಿ ಪೂರ್ಣಗೊಂಡು ಚಾಲನೆಗೊಳಿಸಲಾಗಿದೆ. ಪೈಪ್‌ಲೈನ್ ವಿತರಣಾ ಜಾಲದ ಕೆಲಸ ಪೂರ್ಣಗೊಂಡು ಪ್ರಾಯೋಗಿಕವಾಗಿ ಚಾಲನೆಗೊಳಿಸಲಾಗಿದೆ. |
| 5 | ನಂದವಾಡಗಿ ಏತ ನೀರಾವರಿ ಯೋಜನೆ | ರಾಯಚೂರು & ಬಾಗಲಕೋಟೆ | 36,100 | -- | ಮುಖ್ಯಸ್ಥಾವರದ ಕಾಮಗಾರಿಯು ಪೂರ್ಣಗೊಂಡಿದ್ದು, ಪೈಪ್‌ಲೈನ್ ಕಾಮಗಾರಿಯು ಪ್ರಗತಿಯಲ್ಲಿದೆ. |
| 6 | ಕೆರೂರ ಏತ ನೀರಾವರಿ ಯೋಜನೆ | ಬಾಗಲಕೋಟ | 16,000 | -- | ಮುಖ್ಯ ಸ್ಥಾವರದ ಕಾಮಗಾರಿ ಹಾಗೂ ಏರು ಕೊಳವೆ ಅಳವಡಿಸುವ ಕಾಮಗಾರಿ ಪ್ರಗತಿಯಲ್ಲಿದೆ. |
| | | ಒಟ್ಟು | 1,43,793 | 69,621 | |
| ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3:- | | | | | |
| 1 | ಮುಳವಾಡ ಏತ ನೀರಾವರಿ | ವಿಜಯಪುರ | 2,27,996 | 42,500 | ಮುಖ್ಯ ಸ್ಥಾವರ, ಮುಖ್ಯ ಕಾಲುವೆ ಹಾಗೂ ಕೆರೆಗಳನ್ನು ಸಂಪರ್ಕಿಸುವ ವಿತರಣಾ ಕಾಲುವೆ ಜಾಲ ಪೂರ್ಣಗೊಳಿಸಲಾಗಿರುತ್ತದೆ ಹಾಗೂ ನೀರಾವರಿಯ ವಿತರಣಾ ಕಾಲುವೆ ಜಾಲವು ಪ್ರಗತಿ ಹಚಿತದಲ್ಲಿರುತ್ತವೆ. ಕಾಲುವೆ ಜಾಲಗಳ ಮೂಲಕ ಕೆರೆಗಳಿಗೆ ನೀರನ್ನು ಹರಿಸಲಾಗುತ್ತಿದೆ. |
| 2 | ಚಿಮ್ಮಲಗಿ ಏತ ನೀರಾವರಿ | ವಿಜಯಪುರ | 87,077 | 34,700 | ಮುಖ್ಯ ಸ್ಥಾವರದ ಕಾಮಗಾರಿಯು ಪೂರ್ಣಗೊಂಡಿದ್ದು, ವಿತರಣಾ ಕಾಲುವೆ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. |

| ಕ್ರ ಸಂ. | ಕಾಲುವೆಗಳು | ಯೋಜನೆಗಳು ಒಳಪಡುವ ಜಿಲ್ಲೆ | ಯೋಜಿತ ಅಚ್ಚುಕಟ್ಟು ಹೆಕ್ಟೇರ್‌ಗಳಲ್ಲಿ. | ಅಧಿಸೂಚಿಸಿದ ಅಚ್ಚುಕಟ್ಟು ಹೆಕ್ಟೇರ್‌ಗಳಲ್ಲಿ. | ಪ್ರಸ್ತುತ ಹಂತ |
|---|---|---|---|---|---|
| 3 | ನಾರಾಯಣಪುರ ಬಲದಂಡೆ ಕಾಲುವೆ ವಿಸ್ತರಣೆ | ರಾಯಚೂರು | 61,747 | 14,335 | ಯೋಜನೆಯು ಪೂರ್ಣಗೊಳಿಸಲಾಗಿದೆ. |
| 4 | ಮಲ್ಲಾಬಾದ್ ಏತ ನೀರಾವರಿ | ಕಲಬುರಗಿ | 33,730 | 5,530 | ಯೋಜನೆಯು ಪೂರ್ಣಗೊಳಿಸಲಾಗಿದೆ. |
| 5 | ಇಂಡಿ ಏತ ನೀರಾವರಿ ವಿಸ್ತರಣೆ | ವಿಜಯಪುರ | 20,690 | 19,165 | ಯೋಜನೆಯು ಪೂರ್ಣಗೊಳಿಸಲಾಗಿದೆ. |
| 6 | ರಾಂಪುರ ಏತ ನೀರಾವರಿ ವಿಸ್ತರಣೆ | ರಾಯಚೂರು | 13,923 | 10,672 | ಯೋಜನೆಯು ಪೂರ್ಣಗೊಳಿಸಲಾಗಿದೆ. |
| 7 | ಕೊಪ್ಪಳ ಏತ ನೀರಾವರಿ | ಕೊಪ್ಪಳ | 1,12,000 | 0 | ಯೋಜನೆಯು ಪ್ರಗತಿಯಲ್ಲಿದೆ. |
| 8 | ಭೀಮಾ ಫ್ಲಾಂಕ್ | ಯಾದಗಿರಿ | 21,572 | 0 | ಯೋಜನೆಯು ಪ್ರಗತಿಯಲ್ಲಿದೆ. |
| 9 | ಹೆರಕಲ್ ಏತ ನೀರಾವರಿ | ಬಾಗಲಕೋಟೆ | 15,344 | 4,058 | ಮುಖ್ಯಸ್ಥಾವರದ ಕಾಮಗಾರಿಯು ಪೂರ್ಣಗೊಂಡಿದ್ದು, ವಿತರಣಾ ಕಾಲುವೆ ಕಾಮಗಾರಿಯು ಪ್ರಗತಿಯಲ್ಲಿದೆ. |
| | | ಒಟ್ಟು | **5,94,079** | **1,30,960** | |
| **ಕೃ.ಮೇ.ಯೋ. ಹಂತ-3 ರ ಉಳಿತಾಯದ ನೀರಿನಲ್ಲಿ ಕೈಗೊಂಡ ಯೋಜನೆಗಳು:-** | | | | | |
| 1 | ನಾಗರಬೆಟ್ಟ ಏತ ನೀರಾವರಿ ಯೋಜನೆ | ವಿಜಯಪುರ | 3,200 | 2012 | ಮುಖ್ಯ ಸ್ಥಾವರ ಪೂರ್ಣಗೊಂಡಿದ್ದು, ಮುಖ್ಯ ಕಾಲುವೆ & ವಿತರಣಾ ಕಾಲುವೆ ಜಾಲದ ಕಾಮಗಾರಿಗಳು ಪ್ರಗತಿ ಹಚಿತದಲ್ಲಿವೆ. |
| 2 | ಹೆರ್‌ಕಲ್ (ದಕ್ಷಿಣ) ಏತ ನೀರಾವರಿ ಯೋಜನೆ ವಿಸ್ತರಣೆ | ಬಾಗಲಕೋಟೆ | 6,100 | 0 | ಮುಖ್ಯ ಸ್ಥಾವರ & ಮುಖ್ಯ ಕಾಲುವೆಗಳು, ವಿತರಣಾ ಕಾಲುವೆ ಜಾಲದ ಕಾಮಗಾರಿಗಳು ಪ್ರಗತಿ ಹಚಿತದಲ್ಲಿವೆ. |
| 3 | ಹೊರ್ತಿ-ರೇವಣಸಿದ್ದೇಶ್ವರ ಏತ ನೀರಾವರಿ ಯೋಜನೆ | ವಿಜಯಪುರ | 28,000 | 0 | ಮುಖ್ಯ ಸ್ಥಾವರ ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. & ಪೈಪ್‌ಲೈನ್ ಜಾಲದ ಕಾಮಗಾರಿಯ ಅಚಿದಾಜು ಪತ್ರಿಕೆಯನ್ನು ಅಚಿದಾಜು ಪರಿಶೀಲನಾ ಸಭೆಗೆ ತಿರುವಳಿಗಾಗಿ ಮಂಡಿಸಲಾಗಿರುತ್ತದೆ. |
| 4 | ಬೂದಿಹಾಳ-ಪೀರಾಪುರ ಏತ ನೀರಾವರಿ | ವಿಜಯಪುರ | 17,805 | 0 | ಮುಖ್ಯ ಸ್ಥಾವರ & ಪೈಪ್‌ಲೈನ್ ಜಾಲ ಪೂರ್ಣಗೊಂಡಿದ್ದು, ನಿರ್ವಹಣೆ ಹಚಿತದಲ್ಲಿರುತ್ತದೆ. |
| 5 | ಯಳ್ಳಿಗುತ್ತಿ ಏತ ನೀರಾವರಿ ಯೋಜನೆ | ಬಾಗಲಕೋಟೆ | 750 | 750 | ಮುಖ್ಯ ಸ್ಥಾವರ & ಪೈಪ್‌ಲೈನ್ ಜಾಲ ಪೂರ್ಣಗೊಂಡಿದ್ದು, ನಿರ್ವಹಣೆ ಹಂತದಲ್ಲಿರುತ್ತದೆ. |
| 6 | ಭಗವತಿ ಏತ ನೀರಾವರಿ ಯೋಜನೆ | ಬಾಗಲಕೋಟೆ | 8,390 | 0 | ಮುಖ್ಯ ಸ್ಥಾವರ ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. & ಮುಖ್ಯ ಕಾಲುವೆ ಜಾಲಗಳ ಕಾಮಗಾರಿಯು ಅಂದಾಜು ಪತ್ರಿಕೆ ಹಂತದಲ್ಲಿವೆ. |
| | | ಒಟ್ಟು | **64,245** | **2,762** | |